ಮೊದಲು ಪ್ರೆಸ್ ಮೀಟ್ ಆಗಿ... ಆಮೇಲೆ ನಾನು ನೀನು ಶಾಪಿಂಗ್ ಹೋಗೋಣ...

ಇಷ್ಟು ಮಾತಾಡಲು ಅವರ ಮೊಬೈಲ್ ಅವಕಾಶ ಮಾಡಿಕೊಟ್ಟಿದ್ದೇ ಹೆಚ್ಚು... ರಿಂಗಾಗುತ್ತಿದ್ದ ಮೊಬೈಲಿನ ಸ್ವಿಚ್ ಒತ್ತಿ ಕಿವಿಗಾನಿಸಿ ಎದ್ದು ದೂರ ಸರಿದರು. ಕೋಣೆಯಿಂದ ಆಚೆ ನಡೆದರು.

ನಾನು ಸಿದ್ಧಳಾಗಿ ಲಾಬಿಗೆ ಬರುವ ಹೊತ್ತಿಗೆ ಇವರು, ಮಾವನವರು, ರಂಗಸ್ವಾಮಿ ಎಲ್ಲಾ ಸಿದ್ಧರಾಗಿ ಕಾಯುತ್ತಿದ್ದರು. ಒಡವೆ ಕೊಡಿಸಿ ನನ್ನ ಗೆಲ್ಲಬಲ್ಲರೇ ಇವರು?...

* * *

ರಾತ್ರಿ ದಿಂಬಿಗೆ ತಲೆಯಿಟ್ಟು ಎಷ್ಟು ಹೊತ್ತಾದರೂ ನಿದ್ರೆಯಿಲ್ಲ. ಪ್ರೆಸ್ ಮೀಟ್ ಆದ ಮೇಲೆ ಊಟವಾಯಿತು. ಅಲ್ಲೇ... ಹಸಿವೂ ಇಲ್ಲ... ಅತ್ತ ತಿರುಗಿ ಮಲಗಿರುವ ಇವರ ಉಸಿರಾಟದ ಸದ್ದು ಕೂಡ ಸ್ಪಷ್ಟ ಈ ಮೌನರಾತ್ರಿಯಲ್ಲಿ...

ನೀವು ಬೇಕಾದರೆ ಹೊರಟುಬಿಡೀಪ್ಪ. ಇವಳು ನನ್ನ ಜೊತೆ ಬರ್ತಾಳೆ, ನಾಳೆ ಸಂಜೆ... ರಂಗಸ್ವಾಮಿ.. ನೀವು ಹೊರಡ್ರಿ ಅಪ್ಪನ ಜೊತೆ ನಿರ್ಧಾರ ತೆಗೆದುಕೊಳ್ಳುವುದು ಇವರ ಹಕ್ಕು.

ಇರು! ಇರ್ತ್ಯಾ...! ಇರೋಣವೇ!.... ನೀನು ಹೋಗಬೇಕೇ?... ಇಲ್ಲ.... ಇದ್ಯಾವುದೂ ಇಲ್ಲ.. ಇರ್ತಾಳೆ.... ನಾಳೆ ನನ್ನ ಜೊತೆ ಬರ್ತಾಳೆ... ನಿರ್ಧಾರ ಅಷ್ಟೇ.. ಪಾಲಿಸುವುದು ನನ್ನ ಧರ್ಮ; ಪಾಲಿಸುತ್ತಲೇ ಬಂದಿದ್ದೇನೆ.. ಹಾಗಾಗಿ ನನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡಿದ್ದೇನೆ. ಇಲ್ಲ ಇಲ್ಲ.. ಅವರ ನಿರ್ಧಾರವನ್ನು ವಿರೋಧಿಸಲೇ ಬೇಕೆಂದಿಲ್ಲ. ಮುಂಚೆ ಪ್ರೇಮ ಅನ್ನಿಸುತ್ತಿದ್ದ ಅವರ ಈ ವರ್ತನೆ ಇತ್ತೀಚೆಗೆ ಆಕ್ರಮಣ ಎಂದನ್ನಿಸುತ್ತಿದೆ.

ಈ ಬದಲಾವಣೆಗೆ ಸ್ತ್ರೀಶಕ್ತಿ ಕೊಂಚ ಮೆಟ್ಟಿಗೆ ಕಾರಣವಿರಬಹುದು. ನಾನು ಮಾಡುತ್ತಿರುವ ಕೆಲಸ ಕೆಲವೇ ಗಂಟೆಗಳು ದಿನಕ್ಕೆ, ಹೂಡಿರುವ ಹಣವೂ ಅಲ್ಪವೇ. ಆದರೆ ಅದರ ವ್ಯಾಪ್ತಿಯ ಅರಿವು ಆಗಿದ್ದು ಇಂದು.

ಹಳ್ಳಿಮನೆ ಮನೆತನದ ಜಿಲ್ಲೆಯಲ್ಲಿ ಮೂಡಿರುವ ಹಲವು ಕಾರ್ಯಗಳನ್ನು ಇಂದಿನ ಪ್ರೆಸ್ ಮೀಟಿನಲ್ಲಿ ಪಟ್ಟಿ ಮಾಡಿ ಹೇಳಲಾಯಿತು.

ಶಾಲೆ, ಕಾಲೇಜು, ಇಂಜಿನಿಯರಿಂಗ್ ಕಾಲೇಜು ತೆರೆದು ನಡೆಸುತ್ತಿರುವ ಇವರ ಇತ್ತೀಚಿನ ಕಾರ್ಯ ಶ್ಲಾಘನೀಯ. ಸ್ತ್ರೀಶಕ್ತಿ ಎಂಬ ಹೆಸರಿನಲ್ಲಿ ಇವರು ನಡೆಸುತ್ತಿರುವ ಸ್ತ್ರೀ ಸಂಘಟನೆಯಿಂದ ನೂರಾರು ಹೆಣ್ಣು ಮಕ್ಕಳು ಜೀವನದ ಕಂಡುಕೊಂಡಿದ್ದಾರೆ. ಸ್ವಾವಲಂಬಿಗಳಾಗಿದ್ದಾರೆ. ಸ್ತ್ರೀಶಕ್ತಿಯ ಮುಖ್ಯ ಸಂಚಾಲಕಿ ವಿಕ್ರಮ ಹಳ್ಳಿಮನೆಯವರ ಪತ್ನಿ.

ಇದನ್ನು ನಿರೀಕ್ಷಿಸಿರದ ನನ್ನ ಮುಖ ಕೆಂಪೇರಿತು. ಮೈ ಬಿಸಿಯೇರಿತು. ಹತ್ತು ಹಲವು ಪ್ರಶ್ನೆಗಳು ಸ್ತ್ರೀಶಕ್ತಿಯ ಕುರಿತೇ ಬಂದು ನಾನೇ ಉತ್ತರಿಸಬೇಕಾಗಿ ಬಂತು, ಖುಷಿ, ಹೆಮ್ಮೆ... ತೃಪ್ತಿ, ಸಂಕೋಚ ಎಷ್ಟು ಭಾವನೆಗಳು. ನಾನು ನಮ್ಮೂರಿನಲ್ಲಿ ಮಾಡುತ್ತಿರುವ ಪುಟ್ಟ ಕೆಲಸದ ಮಹತ್ವ ರಾಜಧಾನಿ ಯವರೆಗೂ ತಲುಪಿದೆ ಬೇರೆ ಜಿಲ್ಲೆಗಳಲ್ಲೂ ಹೀಗೇ ಮಾಡಬೇಕು ಎಂದು ಮುಖ್ಯಮಂತ್ರಿಗಳಿಗೆ ಅನ್ನಿಸಿದೆ.

ವಿಕ್ರಮ ಹಳ್ಳಿಮನೆಯವರ ಜೊತೆಗೆ ಅವರ ಪತ್ನಿಗೂ ನಮ್ಮ ಪಕ್ಷಕ್ಕೆ ಸ್ವಾಗತ ಎಂದು ಮುಖ್ಯಮಂತ್ರಿಗಳು ಹೇಳಿದಾಗ ಪತ್ರಕರ್ತರೆಲ್ಲಾ ಚಪ್ಪಾಳೆ ಹೊಡೆದರು.

ಅವಳಿಗೆ ಕೊಟ್ಟ ಮಹತ್ವ ಕೊಂಚ ಅತಿಯೇ ಆಯಿತು.. ಪ್ರೆಸ್ ಮೀಟ್‌ನ ವರದಿಯನ್ನು ಟಿ.ವಿಯಲ್ಲಿ ನೋಡಿದ ಅತ್ತೆ ಫೋನ್ ಮಾಡಿ ಇವರಿಗೆ ಅಂದಿದ್ದು ಲೌಡ್ ಸ್ಪೀಕರ್‌ಗೆ ಹಾಕದೆಯೇ ನಿಚ್ಚಳವಾಗಿ ಕೇಳಿಸಿತು.

ನಮ್ಮ ದುಡ್ಡು... ನಾಲ್ಕು ಜನಕ್ಕೆ ಬಡ್ಡಿಯಿಲ್ಲದೆ ಕೊಟ್ಟು ಅಸಲು ಹಿಂದಕ್ಕೆ ಪಡೆಯುತ್ತಾಳೆ.. ತಿರುಗೀ ನಾಲ್ಕು ಜನಕ್ಕೆ ಹಂಚುತ್ತಾಳೆ.... ಯಾರು ಯಾರನ್ನೊ ಕರೆಸಿ ಏನೇನೋ ಕೆಲಸ ಹೇಳಿಸುತ್ತಾಳೆ.. ಊದಿನ ಕಡ್ಡಿ ಮಾಡು, ಮೇಣದ ಬತ್ತಿ ಮಾಡು, ಹಪ್ಪಳ ಮಾಡು, ಸಂಡಿಗೆ ಮಾಡು.. ಅಂತೆಲ್ಲಾ... ಈಗ ಬೊಂಬೆ ಮಾಡೋದು ಹೇಳಿ ಕೊಡೋಕ್ಕೆ ಯಾವೊನೋ ಬಂದಿದ್ದಾನೆ.. ಒಂದು ದುಡ್ಡಿಲ್ಲ.. ಕಾಸಿಲ್ಲ.. ಲಾಭ ಅನ್ನೊದು ಇಲ್ಲವೇ ಇಲ್ಲ... ಹೊಗಳಿದ್ದು ಯಾಕೆ ಅಷ್ಟೊಂದು? ನನ್ನ ಎಲ್ಲರೂ ಹೊಗಳಿದ್ದು ಅತ್ತೆಯವರಿಗೆ ಬಿಡಿಸಲಾಗದ ಒಗಟು.

ನಿಂಗೆ ಅರ್ಥವಾಗೊಲ್ಲ. ಬಂದಾಗ ಮಾತಾಡೋಣ. ಇವರು ಫೋನ್ ಕಟ್ ಮಾಡಿದರು.

ನಿಜವೇ.... ದುಡ್ಡು ಸಂಪಾದಿಸದ ಕೆಲಸಕ್ಕೆ ಯಾರಾದರು ಯಾಕೆ ಹೊಗಳುತ್ತಾರೆ?. ಅದೂ ಕೆಲಸದ ಹೆಂಗಸರು, ಕೆಳಜಾತಿಯ ಹೆಂಗಸರೊಂದಿಗೆ ಮಾತಾಡುವ ಅವರಿಗೆ ಸಹಾಯ ಮಾಡುವ ಸೊಸೆಯನ್ನು ಹೊಗಳುವುದು ಅವರಿಗೆ ಅರ್ಥವೇ ಆಗಿರುವುದಿಲ್ಲ.

ಮೂರು ವರ್ಷದಿಂದ ಮಾಡುತ್ತಿರುವುದು. ಅದನ್ನು ಗಮನಿಸಿಯೇ ಇರದಂತೆ ಇರುವುದು ಮನೆಯವರೆಲ್ಲರ ಸ್ವಭಾವ, ನಿನ್ನೆ ವಿಶ್ವಾಸ್ ಮನೆಗೆ ಬಂದಾಗ ಅತ್ತೆ ರೇಗಿದ್ದರು. ಇಂದು ಅಷ್ಟು ಹೊಗಳಿಕೆ ಕೇಳಿದ ಮೇಲೂ ಕೊಂಗು ಮಾತೇ.... ಅವರು ಅಂತಲ್ಲ.. ಇವರಿಗೆ, ಮಾವನವರಿಗೆ ಯಾರಿಗೂ ನನ್ನ ಸ್ತ್ರೀಶಕ್ತಿಯ ಬಗ್ಗೆ ಆದರವಿರಲಿಲ್ಲ... ಆ ವಿಚಾರ ಪತ್ರಿಕಾಗೋಷ್ಠಿಯಲ್ಲಿ ಹೇಳಲು ಚೆನ್ನಾಗಿರುತ್ತದೆ ಎಂದು ಆ ರಂಗಸ್ವಾಮಿ ಹೇಳಿರಬೇಕು.

ಎದ್ದು ಕಿಟಕಿಯ ಬಳಿ ನಿಂತೆ ಕರ್ಟನ್ ಕೊಂಚವೇ ಸರಿಸಿ.. ಕಿಟಕಿಯ ಬಾಗಿಲು ತೆರೆದು ಗಾಳಿಗೆ ಮುಖವೊಡ್ಡಿದೆ. ಸರಳುಗಳಿಲ್ಲದ ಕಿಟಕಿ. ಹೊರಗೆ ನಿಂತ ಅನುಭವ... ಬೀಸಿದ ಗಾಳಿಗೆ ಕೂದಲು ಹಾರಾಡಿ ಕಣ್ಣಿಗೆ ಅಡ್ಡಲಾಗಿ ಬಂದಿತ್ತು. ಎರಡೂ ಕೈಗಳಿಂದ ಸರಿಸಿ ಕೂದಲನ್ನು ಕಿವಿಗಳ ಹಿಂದೆ ಸಿಕ್ಕಿಸಿದೆ... ಇಡೀ ಬೆಂಗಳೂರು ಕಣ್ಣಮುಂದೆ... ಬೀದಿ ದೀಪಗಳು, ಕಟ್ಟಡದೊಳಗಿರುವ ದೀಪಗಳು, ರಸ್ತೆಯಲ್ಲಿ ಓಡುತ್ತಿರುವ ವಾಹನಗಳ ದೀಪಗಳು... ಎಲ್ಲೋ ಮದುವೆಯೋ, ಗೃಹಪ್ರವೇಶವೋ, ರಸಸಂಜೆ ಕಾರ್ಯಕ್ರಮವೋ... ಅಲಂಕೃತ ಸಣ್ಣ ಸಣ್ಣ ದೀಪಗಳ ಮಿನುಗು.... ರಾತ್ರಿ ಸರಿಹೊತ್ತು. ಆದರೂ ಸಮಾರಂಭ ಮುಗಿದಿಲ್ಲ.

ಹದಿನಾಲ್ಕು ವರ್ಷದ ಹಿಂದೆ ನನ್ನ ಮದುವೆಯಾದ ರಾತ್ರಿಯೂ ಅಷ್ಟೇ... ಆರತಕ್ಷತೆ ಸಮಾರಂಭ ಮುಗಿಯುವ ವೇಳೆಗೆ ರಾತ್ರಿ ಒಂದು ಗಂಟೆಯಾಗಿತ್ತು... ಛತ್ರದ ಹೊರಗೆ ಹೀಗೇ ದೀಪಗಳು ಮಿನುಗುತ್ತಿದ್ದವೇನೋ... ನಾನು ನೋಡಲಿಲ್ಲ.

ಏನು ನೋಡಿದ್ದು?. ಏನಿಲ್ಲ... ಬೆಳಗ್ಗೆಯೆಲ್ಲಾ ಎದ್ದು, ಕೂತಿದ್ದು ಶಾಸ್ತ್ರಿಗಳು ಹೇಳಿದಂತೆ ..!.. ಮೊಗ್ಗಿನ ಜಡೆ ಮಣಭಾರವಿತ್ತು... ಕೆ.ಜಿ.ಗಟ್ಟಲೆ ತೂಕದ ಡಾಬು, ವೆಂಕಿ, ಕಾಸಿನ ಸರ!.. ಬೈತಲೆ ಬೊಟ್ಟೇ... ಮೂವತ್ತು ಗ್ರಾಂಮಿತ್ತೇನೋ! ಸೀರೆ, ಒಂದು ನಾಲ್ಕು ಕೆ.ಜಿಯಿತ್ತೇನೋ... ಎಲ್ಲವನ್ನು ಹೊತ್ತು ಸಪ್ತಪದಿ ತುಳಿದಿದ್ದು ಇವರೊಂದಿಗೆ.... ಅತ್ತೆಯವರಿಗೆ ಆಸೆ... ಕೆ.ಜಿ. ತೂಕದ ಕಾಲ್ಗೆಜ್ಜೆ, ಎಂಟೋ ಒಂಭತೋ ಸುತ್ತಿನ ಕಾಲುಂಗುರ.... ನಾನಿದಿದ್ದು ನಲವತ್ನಾಲ್ಕು ಕೆ.ಜಿ. ಯಾದರೆ... ಹೊತ್ತ ಸೀರೆ, ಒಡವೆ, ಹೂವಿನ ತೂಕ ಹದಿನೈದು ಕೆ.ಜಿ. ಇತ್ತೇನೋ.

ಧಾರೆಯೆರೆದುಕೊಟ್ಟು ಕಣ್ಣೀರು ಸುರಿಸಿದ ಅಮ್ಮ.... ಕಣ್ಣೀರು ಯಾಕೆ?.. ಮಗಳ ಮದುವೆ ಎಂದು ಸಡಗರ ಪಟ್ಟವಳೂ ಅವಳೇ.... ಮದುವೆಯ ದಿನ ಅತ್ತವಳೂ ಅವಳೇ... ನಾನೇನೋ ಅಂದು ಅಳಲಿಲ್ಲ.. ಅಳಲೂ ತೋಚದಷ್ಟು ಬೆಪ್ಪಾಗಿದ್ದೆ.. ಸಂಜೆಯ ಆರತಕ್ಷತೆಗೂ ಅಷ್ಟೇ.. ನನ್ನ ತಲೆಗಿಂಥ ದೊಡ್ಡ ಗಂಟು ಕಟ್ಟಿದ್ದಳು.. ಅತ್ತೆ ಗೊತ್ತು ಮಾಡಿದ್ದ ಬ್ಯೂಟೀಷಿಯನ್. ಓಷ್ಯೂ ಸೀರೆ, ಮೂರಿಂಚು ಎತ್ತರದ ಚಪ್ಪಲಿ, ತಿರುಗಿ.. ಮಣ ಭಾರದ ಒಡವೆಗಳು... ಈಗ ನೆನೆಸಿಕೊಂಡರೇ ಸುಸ್ತಾಗುತ್ತದೆ... ಕತ್ತಿನಲ್ಲಿರುವ ಒಂದೆಳೆ ಮಾಂಗಲ್ಯದ ಚೈನು.. ಭಾರವೆನ್ನಿಸುತ್ತದೆ... ವಜ್ರದ ಬೆಂಡೋಲೆಯಿಂದ ಕಿವಿ ಜಗ್ಗುತ್ತದೆ ಎಂದೆನ್ನಿಸುತ್ತದೆ. ಬಳೆಗಳನ್ನು ತೆಗೆದಿರಿಸಿದರೆ ಸಾಕು ಎಂದೆನ್ನಿಸುತ್ತದೆ... ಅಂದು ಸುಸ್ತಾದರೂ, ಸುಸ್ತು ಎಂದು ಹೇಳಿಕೊಳ್ಳುವ ಹಾಗೆ ಇರಲಿಲ್ಲ.

ಮೊದಲ ರಾತ್ರಿಯ ವ್ಯವಸ್ಥೆಯೂ ಅತ್ತೆಯವರದೇ.. ನನ್ನ ಮಗನಿಗೆ ಬೇರೆಯವರ ಮನೆಗೆ ಹೋಗಿ ಇದ್ದು ಅಭ್ಯಾಸವಿಲ್ಲ... ಅವನಿಗೆ ಸರಿ ಹೋಗುವುದಿಲ್ಲ. ಎಲ್ಲಾ ಏರ್ಪಾಟು ನಾನು ಮಾಡ್ತೀನಿ... ಹೆಣ್ಣೊಪ್ಪಿಸಿಕೊಂಡ ಮೇಲೆ ನಮ್ಮ ಮನೆಗೇ ಹೋಗಿ ಮನೆ ತುಂಬಿಸಿಕೊಳ್ಳೊ ಶಾಸ್ತ್ರ ಮಾಡ್ತೀವಿ. ಆರತಕ್ಷತೆ ಆದ ಮೇಲೆ ನಮ್ಮ ಮನೆಗೆ ಕರೆದುಕೊಂಡು ಹೋಗಿ ನಿಷೇಕದ ಶಾಸ್ತ್ರವೂ ಮಾಡಿಬಿಡೋದು. ಏನಂತೀರಿ?.

ಅಮ್ಮ ಅಪ್ಪ ಏನೂ ಹೇಳಲಿಲ್ಲ... ಮಗಳ ಅತ್ತೆಯ ಮನೆಯವರ ವೈಭೋಗ, ಧನ, ದೌಲತ್ತು ಅವರು ಊಹಿಸಿಕೊಂಡಿದ್ದಕ್ಕಿಂಥ ಹೆಚ್ಚಿತ್ತು... ಸ್ವಂತ ಮಗಳ ಮದುವೆಯಲ್ಲಿ ಪ್ರೇಕ್ಷಕರಾಗಿ ನಿಂತರು.. ನೀವು ಹೇಗೆ ಹೇಳಿದರೆ ಹಾಗೆ... ಎಂದು ಗೋಣಾಡಿಸಿದ್ದರು. ನಮ್ಮ ಮಗಳೂ ಅಷ್ಟೇ ಇವತ್ತಿನವರೆಗೆ ನನ್ನ, ನಮ್ಮ ಮನೇನ ಬಿಟ್ಟು ಎಲ್ಲೂ ಹೋದವಳಲ್ಲ..! ಎಂದು ಬಾಯಿ ಮಾತಿಗೂ ಹೇಳಲಿಲ್ಲ ಅಮ್ಮ... ಎಲ್ಲಾ ಅವರೇ ಮಾಡಿದರೆ.. ನನ್ನ ಜವಾಬ್ದಾರಿ ಅಷ್ಟು ಕಮ್ಮಿಯಾಯಿತು.... ಮದುವೆ ಆಯ್ತು.. ಮಗಳು ಇನ್ನು ಅವರ ಸ್ವತ್ತು..